RNU AIR DHARWAD

MARCH 16, 2026

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ರಾಜ್ಯ ಮಾಹಿತಿ ಮತ್ತು ಜೈವಿಕ** ತಂತ್ರಜ್ಞಾನ ಇಲಾಖೆ, ಅಧೀನದಲ್ಲಿ ಆರಂಭಿಸಲಾದ ಇಲವೇಟ್ ಕಾರ್ಯಕ್ರಮದಡಿ, ಕಲ್ಯಾಣ ಕರ್ನಾಟಕ ಭಾಗದ 73 ನವೋದ್ಯಮಗಳಿಗೆ, 14 ಕೋಟಿ 46 ಲಕ್ಷ ರೂಪಾಯಿ ಅನುದಾನ ನೀಡಲಾಗಿದೆ. ಇದು ನವೋದ್ಯಮಿಗಳು ಹಾಗೂ ನಾವೀನ್ಯಕಾರರನ್ನು ಪ್ರೋತ್ಸಾಹಿಸುತ್ತಿದೆ ಎಂದು ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ತಮ್ಮ ಎಕ್ಸ್ ಖಾತೆ ಮೂಲಕ ಮಾಹಿತಿ ಹಂಚಿಕೊಂಡಿರುವ ಅವರು, ರಾಜ್ಯ ಸರ್ಕಾರದ ಉಪಕ್ರಮಗಳು, ರಾಜ್ಯಾದ್ಯಂತ ನವೋದ್ಯಮ ಪರಿಸರ ವ್ಯವಸ್ಥೆಯನ್ನು ಬಲಪಡಿಸುತ್ತಿವೆ ಎಂದು ತಿಳಿಸಿದ್ದಾರೆ.

<><><>

**ರಾಜ್ಯದಲ್ಲಿ, ಗೃಹ ಬಳಕೆ ಎಲ್.ಪಿ.ಜಿ.** ಸಿಲಿಂಡರ್‌ಗಳ ಸರಬರಾಜಿಗೆ, ತೊಂದರೆಯಾಗದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಕೆ.ಎಚ್.ಮುನಿಯಪ್ಪ, ಪ್ರಕಟಣೆ ಮೂಲಕ ಸ್ಪಷ್ಟಪಡಿಸಿದ್ದಾರೆ. ಗೃಹ ಬಳಕೆ ಸಿಲಿಂಡರ್‌ನ್ನು, ವಾಣಿಜ್ಯ ಉದ್ದೇಶಕ್ಕಾಗಿ ಬಳಸಿದಲ್ಲಿ, ಕಾನೂನು ಕ್ರಮ ಕೈಗೊಳ್ಳಲಾಗುವುದು; ಅಗತ್ಯ ವಸ್ತುಗಳ ಕಾಯ್ದೆ–1955ರ ಅಡಿ, ಯಾದಗಿರಿ ಜಿಲ್ಲೆಯಲ್ಲಿ 46 ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ 3 ಪ್ರಕರಣಗಳನ್ನು, ದಾಖಲಿಸಲಾಗಿದೆ ಎಂದಿದ್ದಾರೆ.

<><><>

**ಗೃಹ ಹಾಗೂ ವಾಣಿಜ್ಯ ಬಳಕೆ,** ಎಲ್.ಪಿ.ಜಿ. ಸಿಲಿಂಡರ್ ಅಭಾವವನ್ನು ಸರಿದೂಗಿಸಲು, ವಿದೇಶಗಳಿಂದ ಅನಿಲ ಪೂರೈಕೆಯಂತಹ, ಪರ್ಯಾಯ ಮಾರ್ಗ ಕಂಡುಕೊಳ್ಳುವಂತೆ, ಕೇಂದ್ರ ಸರ್ಕಾರಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ರ ಬರೆದು, ಒತ್ತಾಯಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಅವರು ಮಾಹಿತಿ ನೀಡಿ, ಕೇಂದ್ರದ ಪೆಟ್ರೋಲಿಯಂ ಹಾಗೂ ನೈಸರ್ಗಿಕ ಅನಿಲ ಖಾತೆ ಸಚಿವ, ಹರ್ದೀಪ್‌ಸಿಂಗ್ ಪುರಿ ಅವರೊಡನೆ, ತಾವು ಚರ್ಚಿಸಿದ್ದು, ಕೇಂದ್ರ ಸಚಿವರು, ಎಲ್.ಪಿ.ಜಿ. ಸಿಲಿಂಡರ್ ಪೂರೈಕೆಯಲ್ಲಿ ತೊಂದರೆಯಾಗದಂತೆ, ಪರಿಸ್ಥಿತಿ ನಿಭಾಯಿಸುವ ಭರವಸೆ ನೀಡಿದ್ದಾಗಿ, ತಿಳಿಸಿದ್ದಾರೆ.

<><><>

**ಸಾಂಕ್ರಾಮಿಕ ರೋಗಗಳ ನಿರ್ಮೂಲನೆ** ಮತ್ತು ಆರೋಗ್ಯಯುತ ರಾಷ್ಟ್ರ ನಿರ್ಮಾಣದಲ್ಲಿ, ಲಸಿಕೆಯ ಮಹತ್ವದ ಕುರಿತು, ಜಾಗೃತಿ ಮೂಡಿಸಲು, ಇಂದು, ರಾಷ್ಟ್ರೀಯ ಲಸಿಕೆ ದಿನ ಅಥವಾ ರಾಷ್ಟ್ರೀಯ ರೋಗ ನಿರೋಧಕ ದಿನವಾಗಿ, ದೇಶಾದ್ಯಂತ ಆಚರಿಸಲಾಗುತ್ತಿದೆ. ಮಕ್ಕಳಲ್ಲಿ ಲಸಿಕಾಕರಣದ ಅಗತ್ಯತೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಧಾರವಾಡದ ಮಕ್ಕಳ ತಜ್ಞ ವೈದ್ಯರಾದ ಡಾಕ್ಟರ ಗೋಪಾಲಕೃಷ್ಣ ಶಾನಭಾಗ

<><><>

**ಗೋಪಾಲಕೃಷ್ಣ ಶಾನಭಾಗ ಧ್ವನಿ 45 ಸೆಕೆಂದುಗಳು**

<><><>

**ರಾಜ್ಯದ ವಿವಿಧ ಗ್ರಾಮಗಳ ವಸತಿ** ಹಾಗೂ ತಾಂಡಾ ಪ್ರದೇಶಗಳಲ್ಲಿ, ಅಗತ್ಯವಾದ ಸ್ಮಶಾನ ಭೂಮಿ ಮಂಜೂರಾತಿಯ ನಿಟ್ಟಿನಲ್ಲಿ 58 ಕೋಟಿ ರೂಪಾಯಿ ಮೀಸಲಿಡಲಾಗಿದೆ. ಬೀದರ ಜಿಲ್ಲೆ, ಔರಾದನ, 154 ವಸತಿ ಪ್ರದೇಶಗಳಲ್ಲಿ, 9 ವಸತಿ ಪ್ರದೇಶಗಳಿಗೆ ಸ್ಮಶಾನ ಸೌಕರ್ಯವಿಲ್ಲ, ಎರಡು ಗ್ರಾಮಗಳಲ್ಲಿ ವಾರದ ಒಳಗೆ ಸ್ಮಶಾನ ಭೂಮಿ ಒದಗಿಸಲಾಗುವುದು ಎಂದು ಕಂದಾಯ ಖಾತೆ ಸಚಿವರಾದ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ. ವಿಧಾನಸಭೆಯಲ್ಲಿ, ಔರಾದ ವಿಧಾನಸಭಾ ಕ್ಷೇತ್ರದ ಶಾಸಕ ಪ್ರಭು ಚವ್ಹಾಣ್ ಕೇಳಿದ ಪ್ರಶ್ನೆಗೆ ಸಚಿವರು ಉತ್ತರಿಸಿದರು.

<><><>

**ಗದಗ ಜಿಲ್ಲೆ, ಲಕ್ಷ್ಮೇಶ್ವರದ, ಶ್ರೀ ಸೋಮೇಶ್ವರ** ದೇವಸ್ಥಾನದ ಉತ್ತರ ಮಹಾದ್ವಾರದ ದುರಸ್ತಿ ಕಾರ್ಯ, ಜಲನಿರೋಧಕ ಹೊದಿಕೆ ಹಾಕುವುದು, ದೇವಾಲಯದ ಮೇಲ್ಹಾವಣಿ ದುರಸ್ತಿ ಸೇರಿದಂತೆ ಒಟ್ಟು 12 ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದ್ದು, ಇದಕ್ಕಾಗಿ ರಾಜ್ಯ ಸರ್ಕಾರದಿಂದ 2 ಕೋಟಿ 40 ಲಕ್ಷ ರೂಪಾಯಿ ಅನುದಾನ ಮಂಜೂರಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಕೆ ಪಾಟೀಲ್ ತಿಳಿಸಿದ್ದಾರೆ. ಶ್ರೀ ಸೋಮೇಶ್ವರ ದೇವಸ್ಥಾನದ ಉತ್ತರ ಮಹಾದ್ವಾರದ ಸಂರಕ್ಷಣಾ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು. ಗದಗ ಐತಿಹಾಸಿಕ ಹಾಗೂ ಸಾಂಸ್ಕೃತಿಕ ತಾಣಗಳ ಕೇಂದ್ರವಾಗಿದ್ದು, ಅಮೂಲ್ಯ ಪರಂಪರೆಯನ್ನು ಸಂರಕ್ಷಿಸುವುದು ಎಲ್ಲರ ಹೊಣೆಯಾಗಿದೆ ಎಂದರು.

<><><>

**ಹುಬ್ಬಳ್ಳಿ, ಲಿಂಗರಾಜ ನಗರದ ಸಾಂಸ್ಕೃತಿಕ** ಸಮುದಾಯ ಭವನದಲ್ಲಿ ಆಯೋಜಿತ, ಹುಬ್ಬಳ್ಳಿ ನಗರ ತಾಲೂಕು, 11ನೇ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಕಲಬುರಗಿಯ ಹಿರಿಯ ಸಾಹಿತಿ ಡಾಕ್ಟರ ಜಯಶ್ರೀ ದಂಡೆ ಉದ್ಘಾಟಿಸಿದರು. ಡಾಕ್ಟರ ಸ್ನೇಹಾ ಭೂಸನೂರ ಅವರು ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

<><><>

**ಸಹಸ್ರಾರು** ಗ್ರಾಮೀಣ ಮಹಿಳೆಯರಿಗೆ, ಸ್ವಯಂ ಉದ್ಯೋಗಾವಕಾಶ ಒದಗಿಸಿ, ಆತ್ಮನಿರ್ಭರ'ರನ್ನಾಗಿಸಿದ, ಪದ್ಮಶ್ರೀ ರೂಮಾದೇವಿ ಅವರು, ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ, ಟೈಕಾನ್–2026 ಸಮಾವೇಶದಲ್ಲಿ, ಭಾಗವಹಿಸಿದ್ದರು. ರಾಜಸ್ಥಾನದ, ಬಾರ್‌ಮೇರ್ ಜಿಲ್ಲೆಯ, ಚಿಕ್ಕ ಗ್ರಾಮದಲ್ಲಿ ಜನಿಸಿದ, ರೂಮಾದೇವಿ ಅವರು, ಕಸೂತಿ ಹಾಗೂ ಪಾರಂಪರಿಕ ಹಸ್ತಕಲೆಯ ಮೂಲಕ, ಸಾವಿರಾರು ಗ್ರಾಮೀಣ ಮಹಿಳೆಯರನ್ನು, ಸ್ವಾವಲಂಬಿಯಾಗಿಸಿದ್ದಾರೆ.

<><><>

**ವಿಕಸಿತ ಭಾರತ;** *ಗ್ಯಾರಂಟಿ ಫಾರ್ ರೋಜ್‌ಗಾರ್ ಆ್ಯಂಡ್ ಆಜೀವಿಕಾ ಮಿಷನ್ ಗ್ರಾಮೀಣ್* – ವಿ.ಬಿ– ಜಿ ರಾಮ್ ಜಿ ಕಾಯ್ದೆ–2025ರ ಅಡಿ, ಉದ್ಯೋಗ ಖಾತ್ರಿ ಯೋಜನೆ, ಜಾರಿಗೊಂಡ ಕೇವಲ ಒಂದು ವಾರದಲ್ಲಿ, ರಾಜ್ಯಾದ್ಯಂತ, 33 ಸಾವಿರದ 972 ನಕಲಿ ಜಾಬ್‌ಕಾರ್ಡ್ ಪತ್ತೆಯಾಗಿವೆ ಎಂದು, ಕೇಂದ್ರ ಗ್ರಾಹಕ ವ್ಯವಹಾರಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಎಕ್ಸ್ ಮಾಧ್ಯಮದಲ್ಲಿ ಮಾಹಿತಿ ನೀಡಿ, ಪಾರದರ್ಶಕತೆ ಖಾತ್ರಿ ಪಡಿಸಿದ ಬಳಿಕ, ಮನರೇಗಾದಲ್ಲಿ ಈ ಮೊದಲು ನಡೆಯುತ್ತಿದ್ದ, ಭ್ರಷ್ಟಾಚಾರ ಬಯಲಾಗಿದೆ, ಎಂದಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**

<><><>